**CC 63 /2013**

# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ: 63/2013

| ಚಾಸಾ : | 1 | ಪ್ರಾಸಾ:- | 1 |
|---|---|---|---|

| | |
|---|---|
| ಹೆಸರು | ಶ್ರುತಿ |
| ತಂದೆಯ ಹೆಸರು / ಗಂಡನ ಹೆಸರು | ರಾಮಚಂದ್ರ |
| ವಯಸ್ಸು | 29 |
| ಉದ್ಯೋಗ | ಗೃಹಿಣಿ |
| ವಿಳಾಸ | ಕನಕಪುರ |

- - - - - - - - - - - - - - - - - - - - - - - - - - - - - - -

**ದಿ:19.07.2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯವಿಚಾರಣೆ ಎಪಿಪಿ ರವರಿಂದ:-

ಆರೋಪಿಗಳು ಗೊತ್ತು. (ಆರೋಪಿಗಳು ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು, ಅವರ ಗುರುತಿಸುವಿಕೆಯನ್ನು ಆರೋಪಿ ಪರ ವಕೀಲರು ಅಲ್ಲಗಳೆದಿರುತ್ತಾರೆ.) ಚಾಸಾ-2 ನನ್ನ ಗಂಡ. ದಿ.15.1.2012ರಂದು ರಾತ್ರಿ ಸುಮಾರು 10:00 ಗಂಟೆ ಸಮಯದಲ್ಲಿ ನಾವು ಊಟ ಮಾಡಿ ಮಲಗಿದ್ದಾಗ ಆ ಸಮಯದಲ್ಲಿ ಯಾರೋ ನಮ್ಮ ಮನೆಯ ಬಾಗಿಲನ್ನು ತಟ್ಟಿದರು. ನಮ್ಮ ಯಜಮಾನರು ಬಾಗಿಲನ್ನು ತೆಗೆದ ತಕ್ಷಣ ಆರೋಪಿ ವೆಂಕಟೇಶ, ವೀಣಾ, ಅವರ ಮಕ್ಕಳಾದ ಕಾರ್ತಿಕ್ ಮತ್ತು ಕೀರ್ತಿ ರವರು ಎಲ್ಲಾರು ನಮ್ಮ ಮನೆಗೆ ನುಗ್ಗಿ ಆರೋಪಿ-1 ನನ್ನ ಗಂಡನಿಗೆ ಕೈಯಿಂದ ಎಡಕಪಾಲಕ್ಕೆ ಹಾಗೂ ಕಣ್ಣಿಗೆ ಹೊಡೆದಿರುತ್ತಾನೆ. ಆರೋಪಿ-1 ನನ್ನ ಗಂಡನನ್ನು ನಮ್ಮ ತಾತನ ಆಸ್ತಿಯ ವಿಚಾರದಲ್ಲಿ ಕೇಸನ್ನು ರೀಓಪನ್ ಮಾಡಿಸಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ

ಬೋಳಿಮಗನೆ, ಸೂಳೆಮಗನೆ ಎಂದು ಬೈಯಿದ್ದರು. ನಂತರ ಆರೋಪಿ-2 ನಮ್ಮ ಯಜಮಾನರಿಗೆ ಹೊಡೆದಿರುತ್ತಾಳೆ. ಆರೋಪಿ ಕೀರ್ತಿ ನಮ್ಮ ಯಜಮಾನರಿಗೆ ನಮ್ಮ ಮನೆಯಲ್ಲಿದ್ದ ರಿಮೋಟ್‌ನ್ನು ತೆಗೆದುಕೊಂಡು ಎದೆ ಮೇಲೆ ಮತ್ತು ತಲೆಯ ಮೇಲೆ ಹೊಡೆದು ರಕ್ತಗಾಯಪಡಿಸಿರುತ್ತಾರೆ. ನಾನು ಕೇಳಲು ಹೋದಾಗ ಆರೋಪಿ ವೀಣಾ ನನಗೆ ಕೈಯಿಂದ ಬಲಕಪಾಲಕ್ಕೆ ಹೊಡೆದಿರುತ್ತಾರೆ. ಆರೋಪಿ ಕಾರ್ತಿಕ್ ಕೈಯಿಂದ ನನಗೆ ಹೊಡೆದಿರುತ್ತಾರೆ. ನಂತರ ಪಕ್ಕದ ಮನೆಯ ಚಾಸಾ-3 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಗಾಯಾಗೊಂಡಿದ್ದ ನಮ್ಮ ಯಜಮಾನರನ್ನು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡುಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ಮತ್ತು ನಾನು ಸಹ ಚಿಕಿತ್ಸೆ ಪಡೆದಿರುತ್ತೇನೆ. ನಂತರ ನಾನು ಮರುದಿನ ಆಸ್ಪತ್ರೆಗೆ ತೋರಿಸಿದ ನಂತರ ಮಧ್ಯಾಹ್ನ 3:30ಕ್ಕೆ ಹೋಗಿ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಈಗ ತೋರಿಸಿದ ದೂರಿನಲ್ಲಿ ನನ್ನ ಸಹಿಯಿದ್ದು, ಸದರಿ ದೂರನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ರೀಮೋಟ್‌ನ್ನು ನೋಡಿ ಅದೇ ವಸ್ತುವಿನಿಂದ ಆರೋಪಿ ಕೀರ್ತಿ ರವರು ಹೊಡೆದಿರುತ್ತಾರೆಂದು ಗುರುತಿಸಿರುತ್ತಾರೆ. ಸದರಿ ರೀಮೋಟ್‌ನ್ನು ಎಂಒ-1 ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟನಂತರ ಅದೇ ದಿನ ಪೋಲೀಸರು ಸುಮಾರು ಸಂಜೆ 4:30 ಗಂಟೆ ಸಮಯಕ್ಕೆ ಸ್ಥಳ ಮಹಜರ್‌ಗಾಗಿ ಬಂದಿದ್ದು, ಘಟನಾ ಸ್ಥಳವಾದ ಕನಕಪುರ ಕರಿಯಪ್ಪ ರಸ್ತೆಯಲ್ಲಿರುವ ವಾಟರ್ ಟ್ಯಾಂಕ್ ತೇಜಸ್ವಿನಿ ರವರ ಮನೆಯಲ್ಲಿ ನಾನು ತೋರಿಸಿದ ಜಾಗದಲ್ಲಿ ಸ್ಥಳ ಮಹಜರ್‌ನ್ನು ಮಾಡಿ ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ಎಂಒ-1ನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಬರೆದು ಅದಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಮಹಜರ್‌ನ್ನು ಸಂಜೆ 4:30 ರಿಂದ 5:30 ಗಂಟೆಯ ತನಕ ಮಾಡಿರುತ್ತಾರೆ. ಈಗ ತೋರಿಸಿದ ಪಂಚನಾಮೆಯಲ್ಲಿ ನನ್ನ ಸಹಿಯಿದ್ದು, ಸದರಿ ಪಂಚನಾಮೆಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು

ಗುರುತಿಸಲಾಯಿತು. ಗಲಾಟೆಯಲ್ಲಿ ಭಾಗವಹಿಸಿದ್ದ ಕಾರ್ತಿಕ್ ಮತ್ತು ಕೀರ್ತಿ ರವರನ್ನು ನೋಡಿದರೆ ಗುರುತಿಸುತ್ತೇನೆ.

ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದುಡಲಾಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ

# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 63/2013

| ಚಾಸಾ ಃ | 2 | ಪ್ರಾಸಾಃ- | 2 |
|---|---|---|---|
| ಹೆಸರು | ರಾಮಚಂದ್ರಯ್ಯ | | |
| ತಂದೆಯ ಹೆಸರು / ಗಂಡನ ಹೆಸರು | ಲೇಟ್ ಸುಮ್ಮಶೆಟ್ಟಿ | | |
| ವಯಸ್ಸು | 39 | | |
| ಉದ್ಯೋಗ | ಪತ್ರಬರಹಗಾರ | | |
| ವಿಳಾಸ | ಕನಕಪುರ | | |

- - - - - - - - - - - - - - - - - - - - - - - - - - - - - - -

ದಿಃ19.07.2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ ಎಪಿಪಿ ರವರಿಂದಃ-

1 ಮತ್ತು 2ನೇ ಆರೋಪಿಗಳು ಗೊತ್ತು. (ಆರೋಪಿಗಳು ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು, ಅವರ ಗುರುತಿಸುವಿಕೆಯನ್ನು ಆರೋಪಿ ಪರ ವಕೀಲರು ಅಲ್ಲಗಳೆದಿರುತ್ತಾರೆ.) ಚಾಸಾ-1 ನನ್ನ ಹೆಂಡತಿ. ದಿ.15.1.2012ರಂದು ರಾತ್ರಿ ಸುಮಾರು 10ಃ00 ಗಂಟೆ ಸಮಯದಲ್ಲಿ ನಾವು ಊಟ ಮಾಡಿ ಮಲಗಿದ್ದಾಗ ಆ ಸಮಯದಲ್ಲಿ ಯಾರೋ ನಮ್ಮ ಮನೆಯ ಬಾಗಿಲನ್ನು ತಟ್ಟಿದರು. ನಾನು ಬಾಗಿಲನ್ನು ತೆಗೆದ ತಕ್ಷಣ ಆರೋಪಿ ವೆಂಕಟೇಶ, ವೀಣಾ, ಅವರ ಮಕ್ಕಳಾದ ಕಾರ್ತಿಕ್ ಮತ್ತು ಕೀರ್ತಿ ರವರು ಎಲ್ಲಾರು ನಮ್ಮ ಮನೆಗೆ ನುಗ್ಗಿ ಆರೋಪಿ-1 ನನಗೆ ಕೈಯಿಂದ ಎಡಕಪಾಲಕ್ಕೆ ಹಾಗೂ ಕಣ್ಣಿಗೆ ಹೊಡೆದಿರುತ್ತಾನೆ. ನಾನು ಕೇಳಿದಕ್ಕೆ ಆರೋಪಿ-1 ನಮ್ಮ ತಾತನ ಆಸ್ತಿಯ ವಿಚಾರದಲ್ಲಿ ಕೇಸನ್ನು ರೀಓಪನ್ ಮಾಡಿಸಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೋಳಿಮಗನೆ,

ಸೂಳೆಮಗನೆ ಎಂದು ಬೈಯ್ದಿರುತ್ತಾನೆ. ನಂತರ ಆರೋಪಿ-2 ವೀಣಾ ಹಾಗೂ ಕೀರ್ತಿ ರವರು ಸಹ ಕೈಯಿಂದ ನನಗೆ ಹೊಡೆದಿರುತ್ತಾಳೆ. ಆರೋಪಿ ಕೀರ್ತಿ ನನಗೆ ನಮ್ಮ ಮನೆಯಲ್ಲಿದ್ದ ರಿಮೋಟ್‌ನ್ನು ತೆಗೆದುಕೊಂಡು ಎದೆ ಮೇಲೆ ಮತ್ತು ತಲೆಯ ಮೇಲೆ ಹೊಡೆದು ರಕ್ತಗಾಯಪಡಿಸಿರುತ್ತಾನೆ. ಚಾಸಾ-1 ರವರು ಬಿಡಿಸಲು ಬಂದಾಗ ಆರೋಪಿ ವೀಣಾ ಚಾಸಾ-1 ರವರಿಗೆ ಕೈಯಿಂದ ಬಲಕಪಾಲಕ್ಕೆ ಹೊಡೆದಿರುತ್ತಾರೆ. ಆರೋಪಿ ಕಾರ್ತಿಕ್ ಕೈಯಿಂದ ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಆರೋಪಿಗಳೆಲ್ಲಾರು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಕೊಲೆ ಮಾಡುತ್ತೇವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ಪಕ್ಕದ ಮನೆಯ ಚಾಸಾ-3 ಮತ್ತು 4 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಗಾಯಾಗೊಂಡಿದ್ದ ನನ್ನನ್ನು ಚಾಸಾ-1 ರವರು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡುಹೋಗಿ ಚಿಕಿತ್ಸೆ ಕೊಡಿಸಿರುತ್ತಾಳೆ ಮತ್ತು ಚಾಸಾ-1 ರವರು ಸಹ ಚಿಕಿತ್ಸೆ ಪಡೆದಿರುತ್ತಾರೆ. ನಂತರ ಚಾಸಾ-1 ರವರು ಮಧ್ಯಾಹ್ನ 3:30ಕ್ಕೆ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ರೀಮೋಟ್‌ನ್ನು ನೋಡಿ ಅದೇ ವಸ್ತುವಿನಿಂದ ಆರೋಪಿ ಕೀರ್ತಿ ರವರು ಹೊಡೆದಿರುತ್ತಾರೆಂದು ಗುರುತಿಸಿರುತ್ತಾರೆ. ಸದರಿ ರೀಮೋಟ್‌ನ್ನು ಎಂಒ-1 ಎಂದು ಗುರುತಿಸಲಾಯಿತು. ಗಲಾಟೆಯಲ್ಲಿ ಭಾಗವಹಿಸಿದ್ದ ಕಾರ್ತಿಕ್ ಮತ್ತು ಕೀರ್ತಿ ರವರನ್ನು ನೋಡಿದರೆ ಗುರುತಿಸುತ್ತೇನೆ.

ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದುಡಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**